ಶಿಕಾರಿಪುರ ತಾಲ್ಲೂಕಿನಲ್ಲಿ ಅಕ್ರಮವಾಗಿ ಮದ್ಯದ ಅಂಗಡಿ ನಡೆಯುತ್ತಿರುವುದು

2616(3358) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಸರ್ಕಾರದಿಂದ ಮಂಜೂರಾದ ಮದ್ಯದ (ಸಾರಾಯಿ) ಅಂಗಡಿಗಳ ಸಂಖ್ಯೆ ಎಷ್ಟು;

ಆ) ಅಕ್ರಮವಾಗಿ ಸಾರಾಯಿ ಅಂಗಡಿಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) 110

ಆ) ಹೌದು

ಇ) ಸದರಿ ಅಕ್ರಮ ಸಾರಾಯಿ ಅಂಗಡಿಗಳ ವಿರುದ್ಧ ಎರಡು ಮೊಕದ್ದಮೆಗಳನ್ನು ದಾಖಲಿಸಿದೆ. 200 ಪ್ಯಾಕೆಟ್ (20 ಲೀಟರ್‌ಗಳು) ಸಾರಾಯಿ ವಶಪಡಿಸಿಕೊಂಡು ಕಾನೂನು ರೀತ್ಯ ಕ್ರಮ ಜರುಗಿಸಿ ಅಕ್ರಮ ಸಾರಾಯಿ ಅಂಗಡಿಗಳನ್ನು ಮುಚ್ಚಿಸಲಾಗಿದೆ.

ಕರಾವಳಿ ಅಭಿವೃದ್ಧಿ ನಿಗಮದ ಸ್ಥಾಪನೆ ಕುರಿತು

2617(3202) ಶ್ರೀ ಮೋಹನ್ ಕೆ.ಶೆಟ್ಟಿ (ಕುಮುಟ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣ ಜಲ ಭಾಗ್ಯ ನಿಗಮ ಹಾಗೂ ಇತರೆ ನಿಗಮಗಳನ್ನು ಸ್ಥಾಪಿಸಿದ ರೀತಿಯಲ್ಲಿಯೇ ಕರ್ನಾಟಕದಲ್ಲಿ ವೈಶಿಷ್ಟ್ಯಪೂರ್ಣ ಭೌಗೋಳಿಕ ಪರಿಸರವನ್ನು ಹೊಂದಿರುವ ಕರಾವಳಿ ಅಭಿವೃದ್ಧಿ ನಿಗಮ ಸ್ಥಾಪಿಸಲು ಸರ್ಕಾರ ಮನಗಂಡಿದೆಯೆ;

ಆ) ಮನಗಂಡಿದ್ದರೆ ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಆರ್.ಬಿ. ತಿಮ್ಮಾಪೂರ್ (ಯೋಜನಾ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಸರ್ಕಾರಿ ಸೇವೆಯಲ್ಲಿರುವ ಪತಿ-ಪತ್ನಿ ವರ್ಗಾವಣೆ ಬಗ್ಗೆ

2618(3203) ಶ್ರೀ ಮೋಹನ ಕೆ.ಶೆಟ್ಟಿ (ಕುಮುಟ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ನೌಕರರಲ್ಲಿ ಪತಿ-ಪತ್ನಿ ಇಬ್ಬರೂ ಸರ್ಕಾರಿ ಸೇವೆಯಲ್ಲಿದ್ದರೆ ಅಂತಹ ಸರ್ಕಾರಿ ನೌಕರರಿಗೆ ಮಾತ್ರ ದಂಪತಿ ಜೋಡಣೆ ವರ್ಗಾವಣೆ ಸವಲತ್ತು ನೀಡಲಾಗುತ್ತಿದ್ದು, ದಂಪತಿಗಳಲ್ಲಿ ಯಾರಾದರೂ ಒಬ್ಬರು ಸರ್ಕಾರಿ ಸೇವೆಯಲ್ಲಿದ್ದು, ಇನ್ನೊಬ್ಬರು ಖಾಸಗಿ ಉದ್ಯೋಗದಲ್ಲಿದ್ದರೆ ಅಂತಹ ನೌಕರರಿಗೆ ದಂಪತಿ ಜೋಡಣೆ ಸವಲತ್ತು ಒದಗಿಸುವ ಬಗ್ಗೆ ಸರ್ಕಾರ ಮನಗಂಡಿದೆಯೇ;

ಆ) ಇಂತಹ ನೌಕರರ ಸಮಸ್ಯೆಯನ್ನು ಮನಗಂಡಿದ್ದರೆ ಈ ಕುರಿತು ಏನು ಕ್ರಮ ಕೈಗೊಂಡಿದೆ;

ಇ) ಹಾಗಿದ್ದಲ್ಲಿ, ಇಂತಹವರ ಸಮಸ್ಯೆಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?